# ಶ್ರೀಮಾತೆಯವರ ಮೂರು ತಂಗುದಾಣಗಳು

ಜಯರಾಂಬಾಟಿಯಲ್ಲಿನ ಶ್ರೀಮಾತೆಯವರ ಮನೆ



ಸ್ವರ್ಣಗೌರಿ

**ಶ್ರೀಮಾತೆಯವರು ತಮ್ಮ ಜೀವಮಾನದಲ್ಲಿ ಮುಖ್ಯವಾಗಿ ಮೂರು ಸ್ಥಳಗಳಲ್ಲಿ ತಂಗಿ, ಅವನ್ನು ತೀರ್ಥಕ್ಷೇತ್ರಗಳನ್ನಾಗಿ ಮಾಡಿದ್ದಾರೆ. ಈ ಪುಣ್ಯಕ್ಷೇತ್ರಗಳ ಪರಿಚಯ ಮಾಡಿಕೊಟ್ಟಿರುವ ಲೇಖಕಿ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಇವರ ಹಲವು ಲೇಖನಗಳು ಈಗಾಗಲೇ ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.**

**ಜಯರಾಂಬಾಟಿ** : ಶ್ರೀಮಾತೆಯವರು ಜನಿಸಿದ್ದು ಕೊಲ್ಕತಾದಿಂದ ೬೦ ಮೈಲಿ ಹಾಗೂ ಶ್ರೀರಾಮಕೃಷ್ಣ ಜನ್ಮಸ್ಥಳವಾದ ಕಾಮಾರಪುಕುರದಿಂದ ಮೂರು ಮೈಲಿ ದೂರದ ಜಯರಾಂಬಾಟಿ ಎಂಬ ಪುಟ್ಟ ಕುಗ್ರಾಮದಲ್ಲಿ. ಈ ಚಿಕ್ಕ ಹಳ್ಳಿಯ ಕಡೆಗೆ ಶ್ರೀಮಾತೆಯವರಿಗೆ ಏನೋ ಒಂದು ಹೇಳಲಾಗದ ಆಕರ್ಷಣೆ ಇತ್ತು. ಮದುವೆಯಾದ ಮೇಲೆ ಕಾಮಾರಪುಕುರವೇ ಅವರ ಮನೆಯಾದರೂ, ಅವರು ಹುಟ್ಟಿ ಬೆಳೆದ ಆ ಹಳ್ಳಿಯ ಬೀಸುವ ಗಾಳಿ, ಮರಗಿಡಗಳು, ಕೊಳ ಮೈದಾನಗಳು – ಎಲ್ಲವೂ ಅವರಿಗೆ ಅತ್ಯಂತ ಪ್ರಿಯವಾಗಿದ್ದವು. ಒಂದು ಬಾರಿ ಕೊಲ್ಕತಾಗೆ ಪ್ರಯಾಣ ಬೆಳೆಸುವಾಗ ಅವರ ತಾಯಿ, "ಶಾರದೆ, ಮತ್ತೆ ಬಾರಮ್ಮ" ಎಂದು ನುಡಿದರು. ಅದಕ್ಕೆ ಶ್ರೀಮಾತೆಯವರು "ಬಾರದೇ ಏನಮ್ಮಾ?" ಎಂದು ಆಗ್ರಹಪೂರ್ವಕವಾಗಿ ನುಡಿದರಲ್ಲದೆ, ಕೈಯಿಂದ ನೆಲವನ್ನು ಮುಟ್ಟಿ ಹಣೆಗೆ ಒತ್ತಿಕೊಂಡು, **'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ'** ('ತಾಯಿ ಮತ್ತು ತಾಯಿನಾಡು ಸ್ವರ್ಗಕ್ಕಿಂತಲೂ ಮಿಗಿಲು') ಎಂದು ಭಕ್ತಿಪೂರ್ವಕವಾಗಿ ನುಡಿದರು.

ಕೊಲ್ಕತಾದಲ್ಲಿ ಇದ್ದ ಅನುಕೂಲತೆಗಳು ಜಯರಾಂಬಾಟಿಯಲ್ಲಿ ಇರಲಿಲ್ಲ. ಇದಲ್ಲದೆ ಬಿಡುವಿಲ್ಲದ ಕೆಲಸ ಬೇರೆ. ಹಾಗೆಯೇ ತಮ್ಮಂದಿರ, ಇತರ ಸಂಬಂಧಿಕರ ನಿರಂತರ ಕಿರುಕುಳ ಬೇರೆ ಇರುತ್ತಿತ್ತು. ಹಳ್ಳಿಯ ಅನಾರೋಗ್ಯಕರ ಪರಿಸರದಿಂದ ಶ್ರೀಮಾತೆಯವರಿಗೆ ಆಗಾಗ್ಗೆ ಜ್ವರ ಮುಂತಾದ ವ್ಯಾಧಿಗಳು ಬರುತ್ತಿದ್ದವು. ಹೀಗಾಗಿ ಶರೀರ ದುರ್ಬಲವಾಗಿತ್ತು. ಹೀಗೆ ಜಯರಾಂಬಾಟಿಯಲ್ಲಿ ಇರುವುದೆಂದರೆ ಕಷ್ಟಕಾರ್ಪಣ್ಯಗಳ ನಡುವೆಯೇ ಇರಬೇಕಾಗಿಬರುತ್ತಿತ್ತು. ಆದರೂ ಅವರಿಗೆ ತಮ್ಮ ಗ್ರಾಮದಲ್ಲಿ ಇರುವುದೇ ಇಷ್ಟವಾಗುತ್ತಿತ್ತು. ಅಲ್ಲಿನ ವಾಸವೇ ಅವರಿಗೆ ಆನಂದವನ್ನು ತರುತ್ತಿತ್ತು. ಜಯರಾಂಬಾಟಿಯಲ್ಲಿ ಅವರು ಸ್ವಚ್ಛಂದವಾಗಿ ಹಕ್ಕಿಯಂತೆ ಸ್ವತಂತ್ರವಾಗಿ ಓಡಾಡಿಕೊಂಡಿರುತ್ತಿದ್ದರು. ಕೊಲ್ಕತಾದಲ್ಲಿಯಾದರೆ, ಅವರು ಪಂಜರದ ಗಿಳಿಯಂತೆ ಇರಬೇಕಾಗಿತ್ತು.

ಶ್ರೀಮಾತೆಯವರು ಜಯರಾಂಬಾಟಿಯಲ್ಲಿ ತಮ್ಮೆಲ್ಲ ಭಕ್ತ–ಮಕ್ಕಳಿಗೂ ಸುಲಭವಾಗಿ ದೊರೆಯುತ್ತಿದ್ದರು. ಅವರ ಅಕ್ಕರೆಯ ಆರೈಕೆ ಎಲ್ಲರಿಗೂ ಸುಲಭವಾಗಿ ದೊರೆಯುತ್ತಿತ್ತು. ಹೀಗೆ ತಮ್ಮ ಭಕ್ತ–ಮಕ್ಕಳನ್ನು ಅನುಗ್ರಹಿಸುವುದಕ್ಕಾಗಿಯೇ ಅವರು ತಮ್ಮೆಲ್ಲ ಅನನುಕೂಲತೆಗಳನ್ನೂ ಕಡೆಗಣಿಸಿ, ಜಯರಾಂಬಾಟಿಯಲ್ಲಿ ಇರಲು ಇಷ್ಟಪಡುತ್ತಿದ್ದರೇನೋ ಎನ್ನಿಸುತ್ತಿತ್ತು. ಕೊಲ್ಕತಾದಲ್ಲಿ ಅವರ ಎಲ್ಲ ಚಟುವಟಿಕೆಗಳೂ ಸರಿಯಾದ ಸಮಯಕ್ಕೆ ಆಗಬೇಕಾಗಿತ್ತು. ನಾಗರಿಕತೆಯ ಈ ಔಪಚಾರಿಕತೆ ಅವರಿಗೆ ಒಮ್ಮೊಮ್ಮೆ ಬೇಸರ ತರುತ್ತಿದ್ದುದುಂಟು. ಆಗ ಅವರು ಹೀಗೆ ಹೇಳುತ್ತಿದ್ದರು: " ಕೊಲ್ಕತಾದಲ್ಲಿ ನಾನು ಮಾತನಾಡುವಾಗ ಒಂದೊಂದು ಶಬ್ದವನ್ನೂ ತೂಗಿನೋಡಬೇಕು. ಎಲ್ಲಿ ಜನರು ನೊಂದುಕೊಳ್ಳುವರೋ ಎಂದು ಗಮನಿಸಬೇಕು. ಜಯರಾಂಬಾಟಿಯೇ ಚೆನ್ನಾಗಿದೆಯಪ್ಪ! ನನ್ನ ಮನಸ್ಸಿಗೆ ಬಂದಿದ್ದನ್ನು ಹಳ್ಳಿಯವರಿಗೆ ನಿರ್ದಾಕ್ಷಿಣ್ಯವಾಗಿ ಹೇಳಿಬಿಡುತ್ತೇನೆ. ಅವರೂ ಅಷ್ಟೇ. ಯಾವ ಮುಚ್ಚುಮರೆ ಇಲ್ಲದೆ, ಮಾತನಾಡುತ್ತಾರೆ. ಇಲ್ಲಿ ಮನಸ್ಸಿಗೆ ಬೇಜಾರಾಗುವ ಪ್ರಶ್ನೆಯೇ ಇಲ್ಲ. ಆದರೆ ಕೊಲ್ಕತಾದಲ್ಲಿ ಸ್ವಲ್ಪ ಹದತಪ್ಪಿದರೂ ಸಾಕು, ಜನ ನೊಂದುಕೊಳ್ಳುತ್ತಾರೆ."

ಇದಲ್ಲದೆ, ಕೊಲ್ಕತಾದಲ್ಲಿ ಅನೇಕ ಜನ ಸಾಧುಗಳು ಅವರ ಸೇವೆಗೆ ಮುಂದೆ ಬರುತ್ತಿದ್ದರು. ಅವರ ಮೇಲೆ ಈ ಭಾರವನ್ನು ಹೊರಿಸಲು ಶ್ರೀಮಾತೆಯವರಿಗೆ ಇಷ್ಟವಿರಲಿಲ್ಲ. ತಮ್ಮ ಜೊತೆಗೆ ತಮ್ಮ ಪರಿವಾರದವರ – ನಾದಿನಿಯರು ಮತ್ತು ಸೋದರಿ–ಸೊಸೆಯಂದಿರ – ಸುಖ ಸೌಲಭ್ಯಗಳನ್ನೂ ನೋಡಿಕೊಳ್ಳಬೇಕಾಗಿತ್ತು. ಇದು ಕಷ್ಟಸಾಧ್ಯವಾದ ಕೆಲಸವೆಂದು ಶ್ರೀಮಾತೆಯವರಿಗೆ ಚೆನ್ನಾಗಿ ತಿಳಿದಿತ್ತು. ತಮ್ಮಿಂದಾಗಿ ಇತರರಿಗೆ ತೊಂದರೆಯಾಗದಿರಲೆಂದು, ಅವರು ಹಳ್ಳಿಯಲ್ಲಿ ಇರುವುದಕ್ಕೇ ಇಷ್ಟಪಡುತ್ತಿದ್ದರು. ಇನ್ನೊಂದು ಕಾರಣವೆಂದರೆ, ಅವರಿಗೆ ಅಚ್ಚುಮೆಚ್ಚಿನವಳಾದ ಅವರ ತಮ್ಮನ ಮಗಳು ರಾಧು, ಗ್ರಾಮದಲ್ಲಿ ಇರುವುದನ್ನೇ ಬಹುವಾಗಿ ಬಯಸುತ್ತಿದ್ದಳು. ಶ್ರೀಮಾತೆಯವರಿಗೆ ರಾಧುವನ್ನು ಬಿಟ್ಟು ಇರಲಾಗುತ್ತಿರಲಿಲ್ಲ.

ಶ್ರೀಮಾತೆಯವರು ಜಯರಾಂಬಾಟಿಯ ಪ್ರತಿಯೊಬ್ಬ ವ್ಯಕ್ತಿಯ ನಡುವೆಯೂ ಒಂದು ರೀತಿಯ ಅನ್ಯೋನ್ಯ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಇದರಲ್ಲಿ ಹಿರಿಯರು, ಕಿರಿಯರೆಂಬ ಸ್ಥಾನ ಮಾನಗಳ ಭೇದ ಇರುತ್ತಲೇ ಇರಲಿಲ್ಲ. ಗ್ರಾಮವಾಸಿಗಳೆಲ್ಲರೂ ಶ್ರೀಮಾತೆಯವರ ಆದರಕ್ಕೆ ಸಮಾನವಾಗಿ ಪಾತ್ರರಾಗಿದ್ದರು. ಹಬ್ಬದ ದಿನಗಳಲ್ಲಿ ಶ್ರೀಮಾತೆಯವರು ಗ್ರಾಮದ ಜನರನ್ನೆಲ್ಲ ಒಟ್ಟಿಗೆ ಸೇರಿಸಿ ಅವರಿಗೆಲ್ಲ ಔತಣ ಕೊಡುತ್ತಿದ್ದರು. ಇದಲ್ಲದೆ, ವಿಜಯದಶಮಿಯಂದು ಗ್ರಾಮದವರೆಲ್ಲ ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಆಶೀರ್ವಾದ ಪಡೆದು ಹೋಗುತ್ತಿದ್ದರು.

ಈ ರೀತಿಯಲ್ಲಿ ಜಯರಾಂಬಾಟಿಯು ಶ್ರೀಮಾತೆಯವರ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿತು. ತಮ್ಮ ಜೀವನದ ಬಹುಭಾಗವನ್ನು ಅವರು ಇಲ್ಲಿಯೇ ಕಳೆದರು. ಕ್ರಿ.ಶ. ೧೮೫೯ರಲ್ಲಿ, ವಿವಾಹದ ಸಮಯದಲ್ಲಿ ಒಂದು ವಾರ ಕಾಲ ಕಾಮಾರಪುಕುರಕ್ಕೆ ಹೋಗಿಬಂದರು. ಅದಾದನಂತರ, ಕಾಮಾರಪುಕುರ, ದಕ್ಷಿಣೇಶ್ವರ ಮೊದಲಾದ ಕಡೆಗಳಿಗೆ ಆಗಾಗ್ಗೆ ಹೋಗಿಬರುತ್ತಿದ್ದರು. ಕ್ರಿ.ಶ. ೧೮೮೫ರಲ್ಲಿ ದಕ್ಷಿಣೇಶ್ವರಕ್ಕೆ ಏಳನೆಯ ಬಾರಿಗೆ ಹೋದವರು, ಮತ್ತೆ ಜಯರಾಂಬಾಟಿಗೆ ಹಿಂತಿರುಗಿದ್ದು ೧೮೯೦ರಲ್ಲಿಯೇ. ಜಯರಾಂಬಾಟಿಯಿಂದ ಅತಿ ದೀರ್ಘಕಾಲ ಹೊರಗಿದ್ದದ್ದು ಈ ಅವಧಿಯಲ್ಲಿಯೇ.

ಮೊದಮೊದಲು ಶ್ರೀಮಾತೆಯವರು ಜಯರಾಂಬಾಟಿಗೆ ಬಂದಾಗಲೆಲ್ಲ ತಮ್ಮ ತಮ್ಮಂದಿರಲ್ಲಿ ಒಬ್ಬನಾದ ಪ್ರಸನ್ನನ ಮನೆಯಲ್ಲಿ ತಂಗುತ್ತಿದ್ದರು. ಬರಬರುತ್ತ ಅವರ ಬಳಗ ಬೆಳೆಯತೊಡಗಿತು. ಪ್ರಸನ್ನನ ಕುಟುಂಬದವರ ಸಂಖ್ಯೆಯೂ ಹೆಚ್ಚಾಗತೊಡಗಿತು. ಹೀಗಾಗಿ ಪುಣ್ಯಪುಕುರ ಎಂಬ ಕೊಳದ ದಂಡೆಯ ಮೇಲೆ ಅವರಿಗಾಗಿ ಒಂದು ಪ್ರತ್ಯೇಕ ಮನೆಯನ್ನು ಕಟ್ಟಲಾಯಿತು. ಈ ಮನೆಯಲ್ಲಿ ಶ್ರೀಮಾತೆಯವರು ನಾಲ್ಕು ವರ್ಷಗಳ ಕಾಲ ಇದ್ದರು.

ಜಯರಾಂಬಾಟಿಗೆ ಶ್ರೀಮಾತೆಯವರು ಕೊನೆಯದಾಗಿ ಭೇಟಿಕೊಟ್ಟಿದ್ದು ೧೯೧೯ ರಲ್ಲಿ. ೧೯೨೦ ರ ಜುಲೈ ತಿಂಗಳಿನಲ್ಲಿ ಶ್ರೀಮಾತೆಯರಿಗೆ ಕಾಯಿಲೆ ಉಲ್ಬಣಗೊಂಡಿತು. ತಮ್ಮನ್ನು ನೋಡಿಕೊಳ್ಳುತ್ತಿದ್ದ ಸ್ವಾಮಿ ಶಾರದಾನಂದರು (ಶ್ರೀರಾಮ ಕೃಷ್ಣರ ನೇರ ಶಿಷ್ಯರಲ್ಲಿ ಒಬ್ಬರು) ಮತ್ತಿತರ ಭಕ್ತರ ಕೋರಿಕೆಯ ಮೇಲೆ, ೧೯೨೦ ರ ಫೆಬ್ರವರಿಯಲ್ಲಿ ಕೊಲ್ಕತಾಕ್ಕೆ ಹೋಗಿ ಅಲ್ಲಿ 'ಉದ್ಬೋಧನ' ಎನ್ನುವ ಮನೆಯಲ್ಲಿ ಇದ್ದರು. ಅವರು ಕಡೆಯ ಬಾರಿಗೆ ಜಯರಾಂಬಾಟಿಯನ್ನು ಬಿಟ್ಟು ಹೊರಡುವಾಗ, ಗ್ರಾಮಸ್ಥರೆಲ್ಲರೂ ನೆರೆದು ಕಣ್ಣೀರು ಸುರಿಸಿದರು. "ರೋಗ ವಾಸಿಮಾಡಿಕೊಂಡು, ಬೇಗನೆ ಬಂದುಬಿಡಮ್ಮಾ. ಬಹಳ ಕಾಲ ನಮ್ಮನ್ನು ಮರೆತಿರಬೇಡ" ಎಂದು ಕೈಮುಗಿದು ಕೇಳಿಕೊಂಡರು. ಇಂಥ ಆತ್ಮೀಯತೆಯ ಬೆಸುಗೆಯನ್ನು ಶ್ರೀಮಾತೆಯವರು ಎಲ್ಲರೊಡನೆ ಬೆಳೆಸಿಕೊಂಡಿದ್ದರು. ಆದರೆ ಶ್ರೀಮಾತೆಯವರಿಗೆ ಮತ್ತೆಂದೂ ಜಯರಾಂಬಾಟಿಗೆ ವಾಪಸ್ಸು ಬರಲು ಸಾಧ್ಯವಾಗಲೇ ಇಲ್ಲ.

**ಕೋಯಲಪಾರಾ :** ಶ್ರೀಮತೆಯವರ ಪುಣ್ಯಸ್ಮೃತಿಯಿಂದ ಪಾವನಗೊಂಡ ಇನ್ನೊಂದು ಪ್ರಮುಖ ಕ್ಷೇತ್ರವೆಂದರೆ ಕೋಯಲಪಾರಾ. ಶ್ರೀಮಾತೆಯವರು ಜಯರಾಂಬಾಟಿ –ಕೊಲ್ಕತಾ ನಡುವಣ ತಮ್ಮ ಪ್ರಯಾಣದ ಸಮಯದಲ್ಲಿ, ಕೋಯಲಪಾರಾದಲ್ಲಿ ಸ್ವಲ್ಪ ಹೊತ್ತು ತಂಗಿ ವಿಶ್ರಾಂತಿ ತೆಗೆದು ಕೊಳ್ಳುತ್ತಿದ್ದರು. ಅಲ್ಲಿ ಒಂದು ರಾಮಕೃಷ್ಣ ಆಶ್ರಮ ಇತ್ತು. ಆ ಆಶ್ರಮದವರಿಗೆ ಶ್ರೀಮಾತೆಯವರು ಬರುತ್ತಾರೆಂದರೆ ಅದೊಂದು ವಿಶೇಷ ಸಂಭ್ರಮವೇ ಸರಿ. ಅವರ ಸೇವೆಯ ಅವಕಾಶಕ್ಕಾಗಿ ಆಶ್ರಮದವರೆಲ್ಲರೂ ಕಾದುಕುಳಿತಿರುತ್ತಿದ್ದರು. ಶ್ರೀಮಾತೆಯವರಿಗಾಗಿ ಎಂಥ ಕಷ್ಟವನ್ನು ಭರಿಸಲೂ ಅವರು ಸಿದ್ಧರಿದ್ದರು. ಶ್ರೀಮಾತೆಯವರು ಸಹ ಕೋಯಲಪಾರಾದ ಜನಗಳನ್ನು ಬಹಳವಾಗಿ ಪ್ರೀತಿಸುತ್ತಿದ್ದರು. "ಈ ಭಕ್ತರು ತಮ್ಮ ಎಡಗೈ, ಬಲಗೈ ಇದ್ದ ಹಾಗೆ" ಎಂದು ಆತ್ಮೀಯತೆಯಿಂದ ಹೇಳುತ್ತಿದ್ದರು.

ಕೋಯಲಪಾರಾದ ಭಕ್ತರ ಶ್ರದ್ಧೆ ಬಹಳ ಉನ್ನತ ಮಟ್ಟದ್ದು. ಶ್ರೀಮಾತೆಯವರು ಬರುವರೆಂದು ಸುದ್ದಿ ತಿಳಿದೊಡನೆ ಊರಿನ ಕೊಳದ ಸ್ನಾನಘಟ್ಟದ ಹತ್ತಿರ, ತೆಂಗಿನಗರಿಯ ಚಪ್ಪರವನ್ನು ನಿರ್ಮಿಸುತ್ತಿದ್ದರು. ಶ್ರೀಮಾತೆಯವರು ಬರುವ ದಿನ, ಅವರನ್ನು ಸ್ವಾಗತಿಸಲು, ಹಳ್ಳಿಯ ಗಡಿಗಿಂತಲೂ ಮುಂದೆ ಹೋಗಿ ಆಶ್ರಮವಾಸಿಗಳು ಕಾದು ನಿಂತಿರುತ್ತಿದ್ದರು. ಹಾದಿಯ ಕೆಲವು ಭಾಗವನ್ನು ಬಟ್ಟೆಯಿಂದ ಮುಚ್ಚಿ, ಅದರ ಮೇಲೆ ಸಂಭ್ರಮದಿಂದ ಹೂವುಗಳನ್ನು ಹರಡುತ್ತಿದ್ದರು. ಇಷ್ಟೆಲ್ಲ ಸಡಗರ ಶ್ರೀಮಾತೆಯವರ ವಿಶ್ರಾಂತಿಗೆ ಮಾತ್ರವೇ ಇರುತ್ತಿತ್ತು! ಶ್ರೀಮಾತೆಯವರು ಹಳ್ಳಿಗರು ಹಾಸಿದ ಬಟ್ಟೆಯ ಮೇಲೆ ನಡೆದು ಕೊಂಡು ಹೋಗಿ, ಕೆಲಹೊತ್ತು ವಿಶ್ರಮಿಸುತ್ತಿದ್ದರು. ನಂತರ, ಸ್ವಲ್ಪ ಆಹಾರ ತೆಗೆದುಕೊಂಡು, ಜಯರಾಂಬಾಟಿಯ ಕಡೆಗೋ ಅಥವಾ ಕೊಲ್ಕತಾದ ಕಡೆಗೋ ತೆರಳುತ್ತಿದ್ದರು. ಹೊರಡುವ ಮುನ್ನ ಆ ಜನಗಳಿಗೆ ಹೀಗೆ ಹೇಳುತ್ತಿದ್ದರು:"ಈಗ ಇಲ್ಲಿ ನೀವೇ ನನ್ನ ಭರವಸೆ. ಇಲ್ಲಿ ಶ್ರೀರಾಮಕೃಷ್ಣರೇ ತಂಗಿದ್ದಾರೆ. ಹಾಗೆಂದೇ ನಮಗೆಲ್ಲರಿಗೂ ಈ ಜಾಗ ಒಂದು ವಿಶ್ರಾಂತಿಯ ಸ್ಥಳವಾಯಿತು."

ಜಯರಾಂಬಾಟಿಯಿಂದ ಕೊಲ್ಕತಾಗೆ ಹೋಗಲು ಎರಡು ಮಾರ್ಗಗಳಿವೆ – ವಿಷ್ಣುಪುರದ ಮೂಲಕ ಮತ್ತು ಗಾರ್ಬೆಟಾದ ಮೂಲಕ. ಗಾರ್ಬೆಟಾದ ದಾರಿ ದುರ್ಗಮವಾದುದು. ವಿಷ್ಣುಪುರದ ಮೂಲಕ ಹೋಗಬೇಕಾದರೆ, ಕೋಯಲಪಾರಾ ಮೂಲಕ ಹಾದುಹೋಗಬೇಕಾಗಿತ್ತು. ಒಮ್ಮೆ ಒಬ್ಬ ಭಕ್ತರು ಗಾರ್ಬೆಟಾದ ಮೂಲಕ ಹೋಗುವಂತೆ ಹೇಳಿದರು. ಅದಕ್ಕೆ ಶ್ರೀಮಾತೆಯವರು ಒಪ್ಪಲಿಲ್ಲ. ಕೋಯಲಪಾರಾದಲ್ಲಿರುವ ತಮ್ಮ ಭಕ್ತ–ಮಕ್ಕಳ ಸಲುವಾಗಿ, ಯಾವತ್ತೂ ವಿಷ್ಣುಪುರದ ಮೂಲಕವೇ ಹೋಗುವುದಾಗಿ ಖಡಾಖಂಡಿತವಾಗಿ ಹೇಳಿಬಿಟ್ಟರು. ಒಮ್ಮೊಮ್ಮೆ ಅವರು ಹೀಗೆ ಉದ್ಗಾರವೆತ್ತುತ್ತಿದ್ದರು : "ಇದು (ಕೋಯಲಪಾರಾ) ನನ್ನ ಬೈಠಕ್‌ಖಾನೆ."



ಕೋಯಲಪಾರಾದ ಜಗದಂಬಾ ಆಶ್ರಮದ ಹಳೆಯ ಚಿತ್ರ

೧೯೧೩, ಸೆಪ್ಟೆಂಬರ್ ೨೮ರಂದು ಶ್ರೀಮಾತೆಯವರು ಕೊಲ್ಕತಾಗೆ ಆಗಮಿಸಿದರು. ಮುಂದಿನ ವರ್ಷ ಸ್ವಾಮಿ ಕೇಶವಾನಂದರಿಗೆ (ಆ ಗ್ರಾಮದವರೇ ಆಗಿದ್ದ ಕೇದಾರನಾಥ ದತ್ತ; ಅವರೇ ಕೋಯಲಪಾರಾ ಆಶ್ರಮದ ಮುಖ್ಯಸ್ಥರೂ ಆಗಿದ್ದರು.) ಹೀಗೆ ಪತ್ರ ಬರೆದರು: "ಕೋಯಲಪಾರಾದಲ್ಲಿ ನೀನು ನನಗೆ ಒಂದು ಮನೆಯನ್ನು ಕಟ್ಟಿಸಿಕೊಡುವುದಾದರೆ, ನಾನು ಆ ಹಳ್ಳಿಗೆ ಬಂದಾಗಲೆಲ್ಲ, ಅಲ್ಲಿ ತಂಗಲು ಸಾಧ್ಯವಾಗುವುದು. ಜಯರಾಂಬಾಟಿಯಲ್ಲಿ ನನ್ನ ತಮ್ಮಂದಿರ ಸಂಸಾರದ ತಾಪತ್ರಯಗಳು ದಿನದಿನಕ್ಕೂ ಹೆಚ್ಚಾಗುತ್ತಲೇ ಇವೆ... ಏನಾದರೂ ರೋಗರುಜಿನವಾದರೆ, ಎಲ್ಲಿಗೆ ಹೋಗುವುದಕ್ಕೂ ಸ್ಥಳವಿಲ್ಲ." ಈ ಪತ್ರ ತಲುಪಿದ್ದೇ ತಡ, ಕೋಯಲಪಾರಾದ ಆಶ್ರಮವಾಸಿಗಳು ಒಳ್ಳೆ ಹುರುಪಿನಿಂದ ಕೇಶವಾನಂದರ ಹಳೆಯ ಮನೆಯ ಪಕ್ಕದಲ್ಲಿ ಒಂದು ಚಿಕ್ಕ ಮನೆಯನ್ನು ಕಟ್ಟಲು ಆರಂಭಿಸಿಯೇಬಿಟ್ಟರು! ಮೂರು ಪ್ರತ್ಯೇಕ ಕೊಠಡಿಗಳು, ಒಂದು ಅಡುಗೆಯ ಮನೆ ಮತ್ತಿತರ ಸೌಲಭ್ಯಗಳಿಂದ ಕೂಡಿದ ಸುಸಜ್ಜಿತ ಮನೆ ಬಹುಬೇಗನೇ ತಲೆಯೆತ್ತಿತು. ಇದಕ್ಕೆ ಅನಂತರದಲ್ಲಿ 'ಜಗದಂಬಾ ಆಶ್ರಮ' ಎಂದು ಹೆಸರಿಡಲಾಯಿತು.

ಆ ಆಶ್ರಮಕ್ಕೇ ಮೀಸಲಾದ ಒಂದು ವಿಶೇಷತೆ ಇದೆ. ಶ್ರೀಮಾತೆಯವರು ಇಲ್ಲಿ ಶ್ರೀರಾಮಕೃಷ್ಣರ ಚಿತ್ರದ ಪಕ್ಕದಲ್ಲಿ, ತಮ್ಮ ಚಿತ್ರವನ್ನೂ ಪ್ರತಿಷ್ಠಾಪಿಸಿ, ಅದಕ್ಕೂ ಪೂಜೆ ಸಲ್ಲಿಸಿದರು! ಬೇರೆಲ್ಲಿಯೂ ಈ ರೀತಿ ಅವರು ಮಾಡಿದ್ದನ್ನು ನಾವು ಕಾಣುವುದಿಲ್ಲ. ಈ ಸ್ಥಳದ ಇನ್ನೊಂದು ಮಹಿಮೆಯೆಂದರೆ, ಶ್ರೀಮಾತೆಯವರು ಇಲ್ಲಿದ್ದಾಗ ಬಹುಬೇಗ ಆಧ್ಯಾತ್ಮಿಕ ಭಾವಕ್ಕೆ ಏರುತ್ತಿದ್ದರು. ಅನೇಕ ದರ್ಶನಗಳನ್ನು ಹೊಂದುತ್ತಿದ್ದರು. ಶ್ರೀಮಾತೆಯವರು ನೆನೆದಾಗಲೆಲ್ಲಾ, ಶ್ರೀರಾಮಕೃಷ್ಣರು ಅವರಿಗೆ ಇಲ್ಲಿ ದರ್ಶನ ಕೊಡುತ್ತಿದ್ದರಂತೆ!

ರಾಧು ಗರ್ಭಿಣಿಯಾದಾಗ, ಆಕೆ ತುಂಬ ಸೂಕ್ಷ್ಮ ಮನಸ್ಸಿನವಳಾಗಿಬಿಟ್ಟಳು. ಆಕೆಯ ನರಗಳು ಬಹುಬೇಗ ಉದ್ರೇಕಗೊಳ್ಳುತ್ತಿದ್ದವು. ಹೀಗಾಗಿ ಸ್ವಲ್ಪ ಶಬ್ದವನ್ನೂ ಆಕೆಗೆ ಸಹಿಸಲಾಗುತ್ತಿರಲಿಲ್ಲ. ಆಗ ಶ್ರೀಮಾತೆಯವರು ರಾಧುವಿನ ಜೊತೆಗೆ ಆರು ತಿಂಗಳುಗಳ ಕಾಲ ಈ ಜಗದಂಬಾ ಆಶ್ರಮದಲ್ಲಿ ವಾಸ್ತವ್ಯ ಹೂಡಿದ್ದರು. ಕೋಯಲಪಾರಾದ ಆಶ್ರಮವಾಸಿಗಳು, ಶ್ರೀಮಾತೆಯವರು ಜಯರಾಂಬಾಟಿಯಲ್ಲಿ ಇರುವಾಗಲೆಲ್ಲಾ, ವಾರಕ್ಕೆ ಎರಡು-ಮೂರು ಸಲ ತರಕಾರಿ ಕಳಿಸುತ್ತಿದ್ದರು. ಆಶ್ರಮದ ಆರ್ಥಿಕ ಪರಿಸ್ಥಿತಿಯೇನೂ ಆಗ ಅಷ್ಟು ಉತ್ತಮಮಟ್ಟದಲ್ಲಿ ಇರಲಿಲ್ಲ. ಆದರೂ, ಶ್ರೀಮಾತೆಯವರ ಮೇಲಿನ ಭಕ್ತಿಪ್ರೇಮಗಳಿಂದ ಆಶ್ರಮವಾಸಿಗಳು ತರಕಾರಿ ಕಳಿಸುವುದಕ್ಕೆ ಬಹಳ ಪರಿಶ್ರಮಪಡುತ್ತಿದ್ದರು. ಆಶ್ರಮದ ದೈನಂದಿನ ಕೆಲಸಗಳನ್ನೆಲ್ಲ ಮುಗಿಸಿ, ಅಲ್ಲಿ ಇಲ್ಲಿ ಅಲೆದಾಡಿ ತರಕಾರಿಯನ್ನು ಸಂಗ್ರಹಿಸಿ, ತಲೆಯ ಮೇಲೆ ಹೊತ್ತುಕೊಂಡು, ನಡೆದುಕೊಂಡೇ ಹೋಗಿ, ಜಯರಾಂಬಾಟಿಗೆ ತಲುಪಿಸಿ ಬರುತ್ತಿದ್ದರು. ಒಮ್ಮೊಮ್ಮೆ ಅಂಗಡಿಯಿಂದ ತರಕಾರಿಯನ್ನು ಕೊಂಡುತರುತ್ತಿದ್ದರು. ಶ್ರೀಮಾತೆಯವರು ಕೋಯಲಪಾರಾದಲ್ಲಿಯೇ ತಂಗಿದಾಗಲಂತೂ, ಅವರ ಶ್ರದ್ಧೆ ಉತ್ಸಾಹಗಳಿಗೆ ಮಿತಿಯೇ ಇರುತ್ತಿರಲಿಲ್ಲ. ಶ್ರೀಮಾತೆಯವರಿಗೆ ಮತ್ತು ಅವರ ಪರಿವಾರದವರಿಗೆ ಬೇಕಾದ ಏನೇ ವಸ್ತು ಇರಲಿ, ಹುಡುಕಾಡಿ, ಬೇರೆ ಬೇರೆ ಕಡೆಗಳಿಂದ ತಂದಾದರೂ ಸರಿಯೇ, ಒದಗಿಸುತ್ತಿದ್ದರು. ಇದಕ್ಕೆ ಪ್ರತಿಯಾಗಿ ಶ್ರೀಮಾತೆಯೂ ಅವರಿಗೆ, "ನಿಮಗೆಲ್ಲ ಭಕ್ತಿ ಶ್ರದ್ಧೆಗಳು ಉಂಟಾಗಲಿ" ಎಂದು ಮನದುಂಬಿ ಆಶೀರ್ವದಿಸುತ್ತಿದ್ದರು. ಅಷ್ಟೇ ಅಲ್ಲ, ಜಯರಾಂಬಾಟಿಗೆ ತರಕಾರಿಯನ್ನು ಹೊತ್ತುತಂದ ತಮ್ಮ ಭಕ್ತ-ಮಕ್ಕಳಿಗೆ ದಾರಿಯಲ್ಲಿ ತಿನ್ನಲು, ಪುರಿಯನ್ನು ಬಟ್ಟೆತುದಿಗೆ ಕಟ್ಟಿಕೊಡುತ್ತಿದ್ದರು. ಹೀಗೆ ಕೋಯಲಪಾರಾದ ಆಶ್ರಮವಾಸಿಗಳು ಮತ್ತು ಇತರ ಭಕ್ತರು ಶ್ರೀಮಾತೆಯವರ ವಿಸ್ತೃತ ಕುಟುಂಬದ ಅನ್ಯೋನ್ಯ ಸದಸ್ಯರೇ ಆಗಿಬಿಟ್ಟಿದ್ದರು.

ಸ್ವಾಮಿ ಕೇಶವಾನಂದರು (ಆಗ ಕೇದಾರನಾಥ ದತ್ತ) ಒಮ್ಮೆ ಶ್ರೀಮಾತೆಯವರೊಂದಿಗೆ ಹೀಗೆ ಅರಿಕೆ ಮಾಡಿಕೊಂಡರು: "ಅಮ್ಮಾ, ನಿಮ್ಮ ಮಕ್ಕಳೆಲ್ಲಾ ತುಂಬಾ ವಿದ್ಯಾವಂತರು. ಆದರೆ ನಮ್ಮ ಗತಿ ಏನು?" ಅದಕ್ಕೆ ಶ್ರೀಮಾತೆ ಮೃದುವಾದ ಮಾತುಗಳಿಂದ ಹೀಗೆ ಆಶ್ವಾಸನೆ ಕೊಟ್ಟರು: "ಇದೇನು ಹೇಳುತ್ತಿದ್ದೀಯಾ? ಶ್ರೀರಾಮಕೃಷ್ಣರೇನೂ ವಿದ್ವಾಂಸರಾಗಿರಲಿಲ್ಲ. ಎಲ್ಲಕ್ಕಿಂತ ಮುಖ್ಯವಾದುದು ಭಗವಂತನಲ್ಲಿ ಪ್ರೀತಿ. ನೀನು ಇಲ್ಲಿ ಮಾಡಬೇಕಾದ ಕೆಲಸ ಬಹಳಷ್ಟಿದೆ. ಈ ಹುಡುಗರು ನನಗಾಗಿ ಎಷ್ಟೊಂದು ಶ್ರಮ ವಹಿಸುತ್ತಿದ್ದಾರೆ? ನೀನು ಏಕೆ ತಾನೇ ಚಿಂತಿಸಬೇಕು? ನಾನು ನಿಮ್ಮನ್ನು ಬಹುವಾಗಿ ಪ್ರೀತಿಸುತ್ತೇನೆ. ನೀವೆಲ್ಲ ನನ್ನವರೇ ಆಗಿದ್ದೀರಿ."

ಹಿಂದೆಯೇ ಹೇಳಿದ ಹಾಗೆ, ೧೯೨೦ರ ಫೆಬ್ರವರಿಯಲ್ಲಿ ಶ್ರೀಮಾತೆಯವರು ಕಡೆಯಬಾರಿಗೆ ಕೊಲ್ಕತಾಗೆ ಹೋದರು. ಮಾರ್ಗಮಧ್ಯದಲ್ಲಿ ಅವರು ನೀಡಿದ ಆ ಭೇಟಿಯೇ, ಕೋಯಲಪಾರಾದ ಜನಕ್ಕೆ ಅವರು ನೀಡಿದ ಕಟ್ಟಕಡೆಯ ದರ್ಶನವಾಯಿತು. ಜಗನ್ಮಾತೆಯ ಪ್ರತಿರೂಪವಾದ ಶ್ರೀಮಾತೆಯವರನ್ನು ನಿರ್ಮಲಭಾವದ ಸೇವೆಯ ಮೂಲಕ ಆರಾಧಿಸಿದ ಕೋಯಲಪಾರದ ಆ ಮುಗ್ಧಜನರೇ ಧನ್ಯರು.

**ಉದ್ಬೋಧನ** : ಶ್ರೀಮಾತೆಯವರು ಕೊಲ್ಕತಾಗೆ ಬಂದಾಗಲೆಲ್ಲ, ಬೇರೆ ಬೇರೆ ಭಕ್ತರ ಮನೆಗಳಲ್ಲಿ ಉಳಿದುಕೊಳ್ಳಬೇಕಾಗುತ್ತಿತ್ತು,

ಅವರು ಬಹಳ ಸಹನಶೀಲರು. ಆದರೂ ಭಕ್ತರ ಮನೆಗಳಲ್ಲಿ ತಂಗುವುದು ಅವರ ಸ್ವಾತಂತ್ರ್ಯಕ್ಕೆ ಧಕ್ಕೆ ತರುತ್ತಿತ್ತು. ಇದಲ್ಲದೆ, ಅನೇಕ ಅನಾನುಕೂಲತೆಗಳೂ ಇದ್ದವು. ಶ್ರೀಮಾತೆಯವರ ಸೇವೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದ ಪೂಜ್ಯ ಸ್ವಾಮಿ ಶಾರದಾನಂದಜಿ ಅವರ ಮನಸ್ಸನ್ನು ಈ ವಿಷಯ ಬಹಳ ಪೀಡಿಸುತ್ತಿತ್ತು. ಇದಲ್ಲದೆ ಶ್ರೀಮಾತೆಯವರ ಪರಿವಾರವೂ ದೊಡ್ಡದು ಬೇರೆ. ಅವರಿಗೆಲ್ಲ ವ್ಯವಸ್ಥೆ ಮಾಡುವುದು ಗೃಹಸ್ಥಭಕ್ತರಿಗೆ ಅಷ್ಟೊಂದು ಸುಲಭದ ಕೆಲಸವಾಗಿರಲಿಲ್ಲ. ಬಾಡಿಗೆಯ ಮನೆಯನ್ನು ಗೊತ್ತುಮಾಡೋಣವೆಂದರೆ, ಹಣದ ಕೊರತೆ ಅಡ್ಡಿಬರುತ್ತಿತ್ತು. ಶ್ರೀಮಾತೆಯವರು ನಿತ್ಯವೂ ಗಂಗಾಸ್ನಾನ ಮಾಡಲು ಇಚ್ಛಿಸುತ್ತಿದ್ದರು. ಗಂಗಾತೀರದಲ್ಲಿ ಬಾಡಿಗೆಯ ಮನೆ ಸಿಗುವುದೂ ಕಷ್ಟವಾಗಿತ್ತು. ಅಷ್ಟೇ ಅಲ್ಲದೆ, ರಾಮಕೃಷ್ಣ ಮಹಾ ಸಂಘದ ಬಂಗಾಳಿ ಪತ್ರಿಕೆಯಾದ 'ಉದ್ಬೋಧನ'ಕ್ಕೆ ಒಂದು ಕಾರ್ಯಾಲಯದ ಆವಶ್ಯಕತೆಯೂ ಇತ್ತು.

ಇದೆಲ್ಲವನ್ನೂ ಆಲೋಚಿಸಿದ ಸ್ವಾಮಿ ಶಾರದಾನಂದಜಿ ಅವರು ಕೇದಾರಚಂದ್ರ ದಾಸ್ ಎಂಬ ಭಕ್ತನು ಬಾಗ್‌ಬಜಾರ್ ಪ್ರದೇಶದಲ್ಲಿ ದಾನವಾಗಿ ಕೊಟ್ಟಿದ್ದ ೨೬೦ ಚದರ ಗಜಗಳಷ್ಟು ಭೂಮಿಯಲ್ಲಿ ಶ್ರೀಮಾತೆಯವರಿಗಾಗಿ ಒಂದು ಮನೆಯನ್ನು ಕಟ್ಟಿಯೇಬಿಟ್ಟರು! ಅದಕ್ಕಾಗಿ ಬೇಕಾದ ಹಣವನ್ನು ಸ್ವಾಮಿ ವಿವೇಕಾನಂದರ ಪುಸ್ತಕಗಳ ಮಾರಾಟದಿಂದ ಮತ್ತು ಉಳಿದದ್ದನ್ನು ಸಾಲ ಮಾಡಿ ಹೊಂದಿಸಿಕೊಂಡರು.

ಶ್ರೀಮಾತೆಯವರು ೧೯೦೯, ಮೇ ೨೩ರಂದು ಈ ನೂತನ ಗೃಹಕ್ಕೆ ಪದಾರ್ಪಣೆ ಮಾಡಿದರು. ಮನೆಯ ಮುಂಭಾಗದಲ್ಲಿ ವಿಶಾಲವಾದ ಮೈದಾನವಿತ್ತು. ಅನತಿದೂರದಲ್ಲಿಯೇ ಗಂಗಾನದಿಯ ದರ್ಶನವಾಗುತ್ತಿತ್ತು. ಇದನ್ನು ಕಂಡು ಶ್ರೀಮಾತೆಯವರಿಗೆ ಮಹದಾನಂದ ಉಂಟಾಯಿತು. ಕಟ್ಟಡದ ಮಹಡಿಯ ಮೇಲೆ ಶ್ರೀಮಾತೆಯವರು ಮತ್ತು ಅವರ ಪರಿವಾರದವರು ವಾಸಮಾಡುತ್ತಿದ್ದರು. ಕೆಳಗಡೆ, 'ಉದ್ಬೋಧನ' ಕಾರ್ಯಾಲಯವಿತ್ತು. ಸ್ವಾಮಿ ಶಾರದಾನಂದರು ಕೆಳಗಿನ ಸಣ್ಣ ಕೊಠಡಿಯನ್ನೇ ತಮ್ಮ ಕಛೇರಿಯನ್ನಾಗಿ ಮಾಡಿಕೊಂಡಿದ್ದರು. ಮಹಡಿಯ ಮೇಲೆ ಶ್ರೀಮಾತೆಯವರೇ ತಮ್ಮ ಸ್ವಹಸ್ತದಿಂದ ಶ್ರೀರಾಮಕೃಷ್ಣರ ಚಿತ್ರವನ್ನು ಪ್ರತಿಷ್ಠಾಪಿಸಿದರು. ಆ ಪೀಠದ ಮೇಲುಭಾಗದಲ್ಲಿ ನಿವೇದಿತಾ ಹೆಣೆದ ರೇಷ್ಮೆಯ ವಸ್ತ್ರವನ್ನು ಅಲಂಕಾರಕ್ಕೆ ಇರಿಸಿದರು. ಮುಂದೆ, ೧೯೧೫ರಲ್ಲಿ, ಇನ್ನಷ್ಟು ಕೊಠಡಿಗಳನ್ನು ಸೇರಿಸಿ, ಈ ಕಟ್ಟಡವನ್ನು ವಿಸ್ತರಿಸಲಾಯಿತು.

ಈ ಹೊಸಮನೆಗೆ ಬಂದ ಕೆಲವು ವಾರಗಳಲ್ಲಿಯೇ ಶ್ರೀಮಾತೆಯವರಿಗೆ ಸಿಡುಬು ರೋಗ ಬಂದಿತು. ಹತ್ತಿರದಲ್ಲೇ ಇದ್ದ ಶೀತಲಾದೇವಿಯ ದೇವಸ್ಥಾನದ ಅರ್ಚಕರ ಚಿಕಿತ್ಸೆಯಿಂದ ಅವರು ಗುಣಮುಖರಾದರು. ಮೊದಲ ಬಾರಿಗೆ ಬಂದಾಗ, ಅಂದರೆ ೧೯೦೯ರಲ್ಲಿ, ಶ್ರೀಮಾತೆಯವರು ಇಲ್ಲಿ ಆರು ತಿಂಗಳು ಕಾಲ ತಂಗಿದ್ದರು.


ಉದ್ಬೋಧನದ ಪೂಜಾಕೊಠಡಿಯಲ್ಲಿ ಶ್ರೀಮಾತೆಯವರ ಪೂಜೆ

ಉದ್ಬೋಧನದಲ್ಲಿನ ಸಾಧುಬ್ರಹ್ಮಚಾರಿಗಳು ಶ್ರೀಮಾತೆಯವರ ಸೇವೆ ಸ್ವಲ್ಪವಾದರೂ ದೊರಕುವುದೇನೋ ಎಂದು ಕಾತರರಾಗಿದ್ದರು. ಭಕ್ತರೂ, ಸೇವೆಯ ಭಾಗ್ಯ ದೊರೆತರೆ ಸಾಕೆಂದು ಮುಂದೆ ಬರುತ್ತಿದ್ದರು. ಎಲ್ಲ ಜವಾಬ್ದಾರಿಗಳನ್ನೂ ಸಾಧುಬ್ರಹ್ಮಚಾರಿಗಳು ಮತ್ತು ಭಕ್ತರೇ ವಹಿಸಿಕೊಳ್ಳುತ್ತಿದ್ದುದರಿಂದ ಶ್ರೀಮಾತೆಯವರು ಇಲ್ಲಿ ಬಹುಮಟ್ಟಿಗೆ ನಿಶ್ಚಿಂತರಾಗಿ ಇರುತ್ತಿದ್ದರು. ಅಲ್ಲದೆ ಅವರಿಗೆ ಇಲ್ಲಿ ಪೌಷ್ಟಿಕ ಆಹಾರವೂ ದೊರೆಯುತ್ತಿತ್ತು. ಇದರಿಂದ, ಶ್ರೀಮಾತೆಯವರು, ತಕ್ಕಮಟ್ಟಿಗೆ ತಮ್ಮ ಆರೋಗ್ಯವನ್ನು ಕಾಪಾಡಿಕೊಂಡು ಬಂದಿದ್ದರು. ಇದಲ್ಲದೆ, ಯಾರೂ ಅನಾವಶ್ಯಕವಾಗಿ ಶ್ರೀಮಾತೆಯವರನ್ನು ನೋಡುವಂತಿರಲಿಲ್ಲ. ಸಾಧುಗಳ ಸರ್ಪಗಾವಲು ಇತ್ತು. ಇದರಿಂದ ಶ್ರೀಮಾತೆಯವರಿಗೆ ಎಷ್ಟೋ ವಿಶ್ರಾಂತಿ ದೊರೆಯುತ್ತಿತ್ತು. ಶ್ರೀಮಾತೆಯವರು ತಮ್ಮ ಅಂತಿಮ ದಿನಗಳನ್ನು ಇಲ್ಲಿಯೇ ಕಳೆದರು. ಸುಪ್ರಸಿದ್ಧವಾದ ತಮ್ಮ ಚರಮಸಂದೇಶವನ್ನು ಅವರು ನೀಡಿದ್ದೂ ಇಲ್ಲಿಯೇ. ೧೯೨೦, ಜುಲೈ ೨೧ರಂದು ಅವರು ಇಲ್ಲಿ ಮಹಾಸಮಾಧಿಯನ್ನು ಹೊಂದಿದರು.

ಶ್ರೀಮಾತೆ ಶಾರದಾದೇವಿಯವರ ಜೀವನದಲ್ಲಿ ಮೇಲಿನ ಮೂರು ತಂಗುದಾಣಗಳು ಪ್ರಮುಖ ಪಾತ್ರ ವಹಿಸಿವೆ. ಈ ಸ್ಥಳಗಳನ್ನು ಆಧುನಿಕ ಕಾಲದ ತೀರ್ಥಕ್ಷೇತ್ರಗಳನ್ನಾಗಿ ಶ್ರೀಮಾತೆಯವರು ಪರಿವರ್ತಿಸಿದ್ದಾರೆ. ಈ ಸ್ಥಳಗಳು ಇಂದಿಗೂ ಶ್ರೀಮಾತೆಯವರ ಪುಣ್ಯಸ್ಮೃತಿಯಿಂದ ಅನುರಣಿತವಾಗಿವೆ. *